# ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಮತ್ತು ಮೋಹನ್ ಕುಮಾರ್ ಕೊಂಡಜ್ಜಿ ಇವರು ನಿಯಮ-330 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರಿಸುವ ಬಗ್ಗೆ.

*******

**ವಿಷಯ:**

ಕಾಲೇಜು ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಮೊದಲನೆ ಪದವಿ ತರಗತಿಗಳಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್.ಇ.ಪಿ) ಜಾರಿಗೆ ತರಲಾಗಿದೆ. ಇದರಲ್ಲಿ ವಿದ್ಯಾರ್ಥಿಗಳು ತಾವು ಇಚ್ಚಿಸಿದಂತ ಕೋರ್ಸು (ವಿಷಯ)ಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಮಾಡಲು ನಿರ್ಬಂಧ ಉಂಟಾಗಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಲ್ಲಿನ ಪಠ್ಯಕ್ರಮಗಳು (ಸಿಲಬಸ್), ಆನ್‌ಲೈನ್ ಮತ್ತು ಆಫ್‌ಲೈನ್ ಶಿಕ್ಷಣ ವ್ಯವಸ್ಥೆ ಪಠ್ಯಕ್ರಮ ಬೋಧನೆಗೆ ನಿಗದಿಪಡಿಸಲಾದ ಕನಿಷ್ಟ ಬೋಧನಾ ಅವದಿ, ಕಾಲೇಜುಗಳ ಮೊದಲನೆ ಸೆಮಿಸ್ಟರ್‌ಗೆ ಸಂಬಂಧಿಸಿದಂತೆ ಇದುವರೆವಿಗೆ ವೇಳಾಪಟ್ಟಿ ನಿಗದಿಪಡಿಸದೆ ಇರುವುದು ತೀರಾ ಅವೈಜ್ಞಾನಿಕ ಕ್ರಮವಾಗಿದ್ದು, ಶೇಕಡಾ 70% ಕ್ಕೂ ಅಧಿಕ ಮಂದಿ ಅತಿಥಿ ಉಪನ್ಯಾಸಕರೇ ಕಾರ್ಯನಿರ್ವಹಿಸುತ್ತಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಉನ್ನತ ಶಿಕ್ಷಣ, ಐ.ಟಿ. ಅಂಡ್ ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಸರ್ಕಾರದ ಉತ್ತರ:**

ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಮೊದಲನೇ ವರ್ಷದ ಪದವಿ ತರಗತಿಗಳಲ್ಲಿ ಈ ಶೈಕ್ಷಣಿಕ ವರ್ಷದಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (NEP-2020) ಜಾರಿಗೆ ತರಲಾಗಿದೆ.ಇದರ ಪ್ರಕಾರ ವಿದ್ಯಾರ್ಥಿಗಳು ತಾವು ಇಚ್ಛಿಸಿದ ಎರಡು ಕೋರ್ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಬಹುದು.ಇವುಗಳ ಜೊತೆಗೆ ಒಂದು ಓಪನ್ ಎಲೆಕ್ಟಿವ್‌ಎರಡು ಭಾಷೆಗಳು ಮತ್ತು ಇತರೆ ವಿಷಯಗಳನ್ನು ಅಧ್ಯಯನ ಮಾಡಬಹುದು.ನಂತರ ಮೂರನೇ ವರ್ಷದಲ್ಲಿ ಎರಡು ಕೋರ್ ವಿಷಯಗಳಲ್ಲಿ ಒಂದು ವಿಷಯವನ್ನು Major ವಿಷಯವನ್ನಾಗಿ ಮತ್ತೊಂದು Minor ಆಗಿ ಅಥವಾ ಎರಡು ಕೋರ್ ವಿಷಯಗಳನ್ನು Major ಆಗಿಯೂ ಅಧ್ಯಯನ ಮಾಡಿ ಮೂರು ವರ್ಷದ ಸಾಮಾನ್ಯ ಪದವಿ ಪಡೆಯಬಹುದು.

ಮುಂದುವರೆದು, ವಿದ್ಯಾರ್ಥಿಯ ನಾಲ್ಕನೇ ವರ್ಷದಲ್ಲಿ ಅಧ್ಯಯನ ಮುಂದುವರೆಸಿದರೆ ಯಾವುದಾದರೂ ಒಂದು Major ವಿಷಯದಲ್ಲಿ ಅಧ್ಯಯನ ಮುಗಿಸಿ ಆ ವಿಷಯದಲ್ಲಿ ಆನರ್ಸ್ ಪದವಿ ಪಡೆಯಬಹುದು.ನಂತರ ಅದೇ ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನ ಮುಂದುವರೆಸಿ, ಸ್ನಾತಕೋತ್ತರ ಪದವಿ ಪಡೆಯಬಹುದು.

...2

ಇವೆಲ್ಲವೂ ವಿದ್ಯಾರ್ಥಿಯ ಆಯ್ಕೆಗೆ ಬಿಟ್ಟಿದ್ದು, ಯಾವುದಕ್ಕೂ ಬಲವಂತ ಹೇರುವಂತಿಲ್ಲ. ವಿಷಯ ಆಯ್ಕೆಯಲ್ಲಿ ವಿದ್ಯಾರ್ಥಿಗಳು ಸರ್ವ ಸ್ವತಂತ್ರರು.

ಮುಂದುವರೆದು, ಎಲ್ಲಾ ವಿಷಯಗಳಲ್ಲಿಯೂ ಪಠ್ಯಕ್ರಮಗಳನ್ನು ಸಿದ್ಧಪಡಿಸಲಾಗಿದೆ ಹಾಗೂ ಬೋಧನಾ ಅವಧಿ ಮತ್ತು ಪ್ರತಿ ಕೋರ್ಸಿಗೂ ಕ್ರೆಡಿಟ್ ನಿಗದಿಪಡಿಸಲಾಗಿದೆ.ಕೆಲವು ಕೋರ್ಸುಗಳನ್ನು ಆನ್‌ಲೈನ್ ಮೂಲಕ ಅಧ್ಯಯನ ಮಾಡುವುದು ಅಥವಾ ಎಲ್ಲವನ್ನೂ ಆಫ್ ಲೈನ್ ಮುಖಾಂತರವೇ ಅಧ್ಯಯನ ಮಾಡುವುದು ವಿದ್ಯಾರ್ಥಿಗಳ ಆಯ್ಕೆಗೆ ಬಿಟ್ಟ ವಿಚಾರ. ಯಾವುದಕ್ಕೂ ಬಲವಂತವಿರುವುದಿಲ್ಲ.

ಮುಂದುವರೆದು, ಸರ್ಕಾರಿ ಪ್ರಥಮ ಕಾಲೇಜುಗಳಲ್ಲಿ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ತುಂಬಲು ಸರ್ಕಾರದಿಂದ ಈಗಾಗಲೇ ಉಪಕ್ರಮಿಸಲಾಗಿದೆ. ಪ್ರಸ್ತುತ ಒಟ್ಟು 1242 ಸಹಾಯಕ ಪ್ರಾಧ್ಯಾಪಕರ (221 ಹೈದರಾಬಾದ್-ಕರ್ನಾಟಕ ವೃಂದದ ಮತ್ತು 1021 ಉಳಿಕೆ ಮೂಲ ವೃಂದದ ಅಭ್ಯರ್ಥಿಗಳು) ಹುದ್ದೆಗಳ ಭರ್ತಿ ಸಂಬಂಧ ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಲಾಗಿದ್ದು, ಸದರಿ ನಿಯಮಗಳನ್ವಯ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 257 ಡಿಸಿಇ 2019 (ಭಾಗ-3), ದಿನಾಂಕ:15.07.2021ರನ್ವಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ. ತತ್ಪರಿಣಾಮವಾಗಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ದಿನಾಂಕ:30.09.2021ರಂದು ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿರುತ್ತದೆ.

ವಿಶ್ವವಿದ್ಯಾಲಯಗಳಲ್ಲಿ ಖಾಲಿಯಿರುವ ಬೋಧಕ ಹುದ್ದೆಗಳ ಪೈಕಿ ಆರ್ಥಿಕ ಇಲಾಖೆಯ ದಿನಾಂಕ:24.11.2021ರ ಸುತ್ತೋಲೆಯನ್ವಯ ಪ್ರಸ್ತುತ 371-ಜೆ ರಡಿಯ ಸ್ಥಳೀಯ ವೃಂದದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ ಹಾಗೂ ಉಳಿಕೆ ಮೂಲ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಪಡೆಯಲಾಗುತ್ತಿದೆ.

ಆದ್ದರಿಂದ, ಬೋಧನಾ ಕಾರ್ಯಗಳಿಗೆ ತೊಂದರೆಯಾಗದಂತೆ ಅತಿಥಿ ಉಪನ್ಯಾಸಕರನ್ನು ಅವರ ಅರ್ಹತೆ ಆಧಾರದ ಮೇಲೆ ನೇಮಕ ಮಾಡಿಕೊಂಡು ದೈನಂದಿನ ಬೋಧನಾ ಕಾರ್ಯಗಳನ್ನು ನಡೆಸಲಾಗುತ್ತಿದೆ.

---

**ಸಂ. ಇಡಿ 354 ಯುಎನ್‌ಇ 2021**

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.